ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಪ್ರಕಟಣೆ

ಅಧ್ಯಕ್ಷರು.— ವಿಧಾನ ಪರಿಷತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

" ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ಸಡವಳಿಕೆಯ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೧೦.೯.೧೯೮೭ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

೧) ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣ) ವಿಧೇಯಕ, ೧೯೮೭.

೨) ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೭.

ಅರ್ಧ ಗಂಟೆ ಕಾಲ ಚರ್ಚೆ

ಕರ್ನಾಟಕ ಆಗ್ರೊ ಕಾರ್ಸ್ ಕಂಪನಿಯು ನಿಯಮಿತದಲ್ಲಿನ ನೌಕರರಂಗಳಿಗೆ ಕೊಡುತ್ತಿರುವ ಕಿರುಕುಳದ ಬಗ್ಗೆ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ) —ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸರ್ಕಾರದ ವತಿಯಿಂದ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ಒಂದು ಉದ್ಯಮವನ್ನು ಸ್ಥಾಪನೆ ಮಾಡಲಿ, ಆ ಉದ್ಯಮದಲ್ಲಿ ಈ ರಾಜ್ಯದ ಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಸಿಗಬೇಕೆಂ ಮತ್ತು ಅವರ ಬೇಡಿಕೆಗಳನ್ನು ಪೂರೈಸತಕ್ಕಂಥ ವ್ಯವಸ್ಥೆ ಆಗಬೇಕೆಂಬ ಉದ್ದೇಶದಿಂದ ಈ ಉದ್ಯಮಗಳನ್ನು ಪ್ರಾರಂಭ ಮಾಡುತ್ತದೆ. ಆದರೆ ೧೯೭೩-೭೪ರಲ್ಲಿ ಈ ಆಗ್ರೊ ಕಾರ್ಸ್ ಕಂಪನಿ ಎನ್ನತಕ್ಕಂಥ ಕಂಪನಿಯನ್ನು ಪ್ರಾರಂಭ ಮಾಡಿದರು. ಈ ಕಂಪನಿಯಲ್ಲಿ ಒಟ್ಟು ೫೩ ಜನ ಉದ್ಯೋಗಸ್ಥರು ಇದ್ದಾರೆ. ಅವರಿಗೆ ಉದ್ಯೋಗ ಕೊಡತಕ್ಕದ್ದರಲ್ಲಿ ಈ ರಾಜ್ಯದ ಜನರಿಗೆ ಆದ್ಯತೆಯನ್ನು ಕೊಡತಕ್ಕದ್ದು ಸೂಕ್ತ.

ಈಗ ಏನಾಗಿದೆ ಎಂದರೆ, ಅಲ್ಲಿ ೩೦ ಜನ ಹೊರಗಿನವರು ಇದ್ದಾರೆ. ಈ ರಾಜ್ಯದಲ್ಲಿ ಎಷ್ಟು ಅರ್ಹತೆ ಉಳ್ಳವರು ಇದ್ದರೂ ಕೂಡ ಹೊರಗಿನವರಿಗೆ ಆದ್ಯತೆ ಕೊಡಲಾಗಿದೆ. ಮೇಲಧಿಕಾರಿಗಳೆಲ್ಲಾ ಹೊರಗಿನವರಾಗಿರುವುದರಿಂದ, ಅವರ ಕೈಕೆಳಗೆ ಕೆಲಸ ಮಾಡತಕ್ಕಂಥ ಬೇರೆ ಅಧಿಕಾರ ವರ್ಗದವರು ಈ ರಾಜ್ಯದವರಾಗಿರುವುದರಿಂದ, ಮೇಲಧಿಕಾರಿಗಳ ತಾಳಕ್ಕೆ ಯಾರೂ ಕಾಲು ಹಾಕುವುದಿಲ್ಲ. ಅವರ ವೈಯಕ್ತಿಕ ಹಿತಾಸಕ್ತಿಗಳಿಗೆ ಯಾರು ಸಹಕರಿಸುವುದಿಲ್ಲ, ಈ ಬಡ ನೌಕರರಿಗೆ ಕಿರುಕುಳ ಆಗುತ್ತಿರತಕ್ಕಂತಾದ್ದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಉದಾಹರಣೆಗೆ ಅಲ್ಲಿ ಅಂದರೆ ಕರ್ನಾಟಕ ಆಗ್ರೊ ಕಾರ್ಸ್ ಕಂಪನಿಯ ಕಾರ್ಮಿಕರ ಸಂಘ ಇದೆ. ಅಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಅಧಿಕಾರಿಗಳು ತಾರತಮ್ಯ ತೋರಿಸುತ್ತಿದ್ದಾರೆಂದು ತಿಳಿದು ಬಂದಿದೆ. ಅವರು ತಮಗೆ ಆಗುತ್ತಿರುವ ಕಿರುಕುಳದ ಬಗ್ಗೆ, ೮ ಬೇಡಿಕೆಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಇಲ್ಲಿ ಒಂದನ್ನು ಹೇಳುತ್ತೇನೆ. ಅಧಿಕ ಕಾಲದ ಭತ್ಯವನ್ನು ತಮಗೆ ಬೇಕಾದವರಿಗೆ ಕೊಡುತ್ತಾರೆ. ಉಳಿದ ಕಾರ್ಮಿಕರಿಗೆ ಅಧಿಕ ಕಾಲದ ಭತ್ಯವನ್ನು ಕೊಡುವುದಿಲ್ಲ. ಅವರು ಕೊಡುವ ಕಾರಣ ನಿವು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂಬ ಒಂದೇ ನೆಪ ಹೇಳುತ್ತಾರೆ. ಈ ಅಧಿಕ ಕಾಲದ ಭತ್ಯ ಕೊಡುವಾಗ ಆಗುತ್ತಿರುವ ಈ ಅನ್ಯಾಯವನ್ನು, ತಾವು ಖುದ್ದಾಗಿ ಪರಿಶೀಲಿಸಿ, ನಮಗೆ ನ್ಯಾಯವನ್ನು ಕೊಡಬೇಕೆಂದು ಕೇಳಿದ್ದಾರೆ. ಎಲ್ಲಾ ಕಾರ್ಮಿಕರು ಕೆಲಸ ಮಾಡಿದ್ದರೂ, ಅವರಿಗೆ ಒಬ್ಬರಿಗೆ ಕೊಟ್ಟು, ಒಬ್ಬರಿಗೆ ಬಿಡುವುದು ಅಂದರೆ ಏನು ? ಒಂದೇ ಸಮನಾಗಿ ಎಲ್ಲರಿಗೂ ಈ ಅಧಿಕ ಕಾಲದ ಭತ್ಯೆ ಕೊಡುವುದು ನ್ಯಾಯವಿದೆ. ಇದರಲ್ಲಿ ತಾರತಮ್ಯವನ್ನು ತೋರಿಸಿದ್ದಾರೆ. ಅವರು ಕೊಟ್ಟಿರತಕ್ಕಂಥ ಬೇಡಿಕೆಯಲ್ಲಿ ಇದು ಇದೆ. ಈ ಕಾರ್ಮಿಕ ಸಂಘದ ಅಧ್ಯಕ್ಷರೂ, ಉಗ್ರಪ್ಪ ಎಂದು ಯುವಜನತಾ ಅಧ್ಯಕ್ಷರೂ ಕೂಡ. ಇವರೂ ಕೂಡ ಅನೇಕ ಬಾರಿ ಪ್ರಯತ್ನಿತ ಪಟ್ಟರೂ ಈ ತಾರತಮ್ಯವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಯಾರು ಇವರಿಗೆ ಅನುಕೂಲವಾಗಿ ನಡೆದುಕೊಳ್ಳುತ್ತಾರೆ, ಅವರಿಗೆ ಮಾತ್ರ ಪ್ರೋತ್ಸಾಹ ದೊರೆಯುತ್ತದೆ.

ಎರಡನೆಯದಾಗಿ, ಮತ್ತೊಬ್ಬರು ಈ ರಾಜ್ಯದವರು ಶ್ರೀ ಹುಲ್ಲಾಮನಿ ಎಂಬ ಅಧಿಕಾರಿಗಳು ಇದ್ದಾರೆ, ಇವರಿಗೆ ಸೀನಿಯರ್ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಬಡ್ತಿ ಸಿಕ್ಕಿದೆ. ಇವರು ೧೬ ವರ್ಷಗಳ ಕಾಲ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಇದಕ್ಕೆ ನಿದರ್ಶನ ನಡೆದಿರತಕ್ಕ ಆಡಿಟ್ ವರದಿಗಳು. ೧೯೮೨-೮೩, ೧೯೮೩-೮೪, ೧೯೮೪-೮೫, ೧೯೮೫-೮೬ ಅಲ್ಲದೆ. ಅವರ ೧೬ ವರ್ಷಗಳ ಸೇವೆಯ ಅವಧಿಯಲ್ಲಿ ಎಲ್ಲಾ ವರ್ಷದ ಆಡಿಟ್ ರಿಪೋರ್ಟ್‌ಗಳಲ್ಲಿ ಯಾವುದೇ ವಿಧವಾದ ದೂರು ಅವರ ಮೇಲೆ ಇಲ್ಲ, ಮೇಲಧಿಕಾರಿಗಳು ಎಂದರೆ ವ್ಯವಸ್ಥಾಪಕ ನಿರ್ದೇಶಕರು. ಶ್ರೀ ಬಾಲ ಸುಬ್ರಹ್ಮಣ್ಯಂ ಎಂದು ಇದ್ದಾರೆ. ಇವರಿಗೆ ಅನುಕೂಲವಾದ, ದುರುದ್ದೇಶ ಇಟ್ಟುಕೊಂಡು, ತೊಂದರೆ ಕೊಡಬೇಕೆಂಬ ಒಂದೇ ದೃಷ್ಟಿಯಿಂದ ಇವರ ಮೇಲೆ ಇಂಟರ್‌ನಲ್ ಎನ್‌ಕ್ವೈರಿ ಮಾಡಿಸಿದ್ದಾರೆ. ಈ ರಿಪೋರ್ಟ್ ಮೂಲಕ ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ತದನಂತರ, ಅವರನ್ನು ಕೆಲಸದಿಂದ ತೆಗೆದು ಹಾಕತಕ್ಕ ಕೆಲಸ ಮಾಡಿದ್ದಾರೆ. ಈ ಇಂಟರ್‌ನಲ್ ಆಡಿಟ್ ರಿಪೋರ್ಟ್ ಏನಿದೆ ಇದನ್ನು ಸರ್ಕಾರಕ್ಕೆ ಕಳುಹಿಸುವಂಥ ಕೆಲಸವನ್ನೂ ಅವರು ಮಾಡಿಲ್ಲ. ಆಗಿರತಕ್ಕ ಅನ್ಯಾಯದ ವಿರುದ್ಧ ಸಂಬಂಧಪಟ್ಟ ಅಧಿಕಾರಿ ಅಂದು ವ್ಯವಸಾಯ ಮಂತ್ರಿಗಳಾಗಿರುವ ಶ್ರೀ ಬಸವರಾಜ ಪಾಟೀಲ್ ಅನ್ವರಿ ಅವರಿಗೂ ದೂರು ಸಲ್ಲಿಸಿದ್ದಾರೆ. ಅವರು ಸೆಕ್ರೆಟರಿ ಮೂಲಕ ಇದನ್ನು ತರಿಸಿಕೊಂಡು ನೋಡಿದ್ದಾರೆ. ಅವರೂ ಕೂಡ ಕೆಲಸದಿಂದ ತೆಗೆದಿರತಕ್ಕಂಥಾದ್ದು ಸಾಧುವಲ್ಲ ಎಂದು, ಅವರಿಗೆ ಇಂತಿಷ್ಟು ತೊಂದರೆಯಾಗಿದೆ ಎಂದು ತಿಳಿದಂ ಬಂದ ಮೇಲೆ ಅವರಂ ಒಂದು ನಿರ್ಧಾರಕ್ಕೆ ಬಂದರು.

ಸಂಬಂಧಪಟ್ಟಂಥ ವ್ಯವಸ್ಥಾಪಕ ನಿರ್ದೇಶಕರನ್ನು ಮಾನ್ಯ ಮಂತ್ರಿಗಳು ಮೂರು ಸಾರಿ ತಮ್ಮ ಚೇಂಬರ್‌ಗೆ ಕರೆಸಿ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ ಅವರು ಏನು ಬರೆದಿದ್ದಾರೆ ಎಂದರೆ, " ಈ ಪ್ರಕರಣದ ಬಗ್ಗೆ ಆಗ್ರೋಕಾರನ್ ವ್ಯವಸ್ಥಾಪಕ ನಿರ್ದೇಶಕರ ಜೊತೆಯಲ್ಲಿ ಚರ್ಚಿಸಿದ್ದೇನೆ, ಸರ್ಕಾರಿ ನೌಕರರನ್ನು ವಜಾ ಮಾಡುವ ಕ್ರಮದ ಸಾಮಾನ್ಯ ರೀತಿಯಿಂದ ಇದು ಸರಿಯಾದುದಲ್ಲ. ವಜಾ ಮಾಡಿದ ರೀತಿ ಕಾನೂನಿಗೆ ವ್ಯತಿರಿಕ್ತವಾಗಿದೆ. ಈ ರೀತಿ ವಜಾ ಮಾಡಿರುವುದನ್ನು ರದ್ದು ಗೊಳಿಸಿ, ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಂಡು, ವಜಾ ಮಾಡಿದ ಅವಧಿಯಿಂದ ಅವರನ್ನು ಸೇವೆಯಲ್ಲಿ ಮುಂದುವರಿಸುವುದು ಸರಿ, ಈ ರೀತಿ ಮಾಡಬೇಕಂ " ಎಂದು ಮಾನ್ಯ ಮಂತ್ರಿಗಳು ಕೃಷಿ ಇಲಾಖೆಯ ಕಾರ್ಯದರ್ಶಿಯವರಿಗೆ ಬರೆದಿದ್ದಾರೆ. ಈ ತೀರ್ಮಾನಕ್ಕೆ ಸಚಿವರು ಬಂದು ವ್ಯವಸ್ಥಾಪಕ ನಿರ್ದೇಶಕರಿಗೆ ಈ ವಿಚಾರವನ್ನು ತಿಳಿಸಿದ್ದಾರೆ. ಆಡಿಟ್ ವರದಿಯಲ್ಲಿ ಈ ಅಧಿಕಾರಿಯ ಮೇಲೆ ಏನೂ ಆರೋಪಗಳು ಇಲ್ಲ. ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಎಲ್ಲ ಇಲಾಖೆಗಳಲ್ಲಿ ವಾರ್ಷಿಕವಾಗಿ ಆಡಿಟ್ ಮಾಡತಕ್ಕಂಥ ವ್ಯವಸ್ಥೆ ಇರುತ್ತದೆ ಆಲ್ಲಿ ನಡೆಯುತ್ತಿರತಕಂಥ ವ್ಯವಹಾರಗಳ ಬಗ್ಗೆ ಆಡಿಟ್ ಮಾಡತಕ್ಕ ವ್ಯವಸ್ಥೆ ಇದೆ. ಆಡಿಟ್ ವರದಿಯಲಿ ಲಕ್ಷಗಟ್ಟಲೆ ಹಣ ದುರುಪಯೋಗ ಪಡಿಸಿಕೊಂಡಿರುವ ಪ್ರಕರಣಗಳು ರಾಜ್ಯದಲ್ಲಿ ಹತ್ತಾರು ಸಾವಿರ ಇದ್ದರೂ ಸಹ ಏನೂ ಆಗಿಲ್ಲ. ಎಲ್ಲ ಇಲಾಖೆಗೆ ಹೋದರೂ ಎಲ್ಲ ಅಧಿಕಾರಿಗಳ ಮೇಲೆ ಇದೆ. ಸುಮಾರು ೫ ಪರ್ಸೆಂಟ್ ಜನರ ಮೇಲೆ ಇದು ಇರಬಹುದು ಎಂದು ನನಗನ್ನಿಸುತ್ತದೆ. ನನಗೆ ಗೊತ್ತಿರುವಂತೆ ಅನೇಕ ಕಡೆ ಇದು ಇದೆ. ಆದರೆ ಈ ಕಾರಣಕ್ಕಾಗಿ ಅವರನ್ನು ದಿಸ್ಮಿಸ್ ಮಾಡುವುದನ್ನು ಮಾಡಿಲ್ಲ. ಆಡಿಟ್ ವರದಿಯಲ್ಲಿ ಅವರ ಮೇಲೆ ಆರೋಪ ಬಂದರೂ ಸಹ ಅವರು ಅಧಿಕಾರದಲ್ಲಿದ್ದಾರೆ, ಪ್ರಮೋಷನ್ ಪಡೆದಿದ್ದಾರೆ. ಆದರೆ ಈ ಅಧಿಕಾರಿಯ ಮೇಲೆ ಆಡಿಟ್ ವರದಿಯಲ್ಲಿ ಏನೂ ಇಲ್ಲದೇ ಇದ್ದರೂ ಸಹ ಇಂಟರ್‌ನಲ್ ಆಡಿಟ್ ಎಂದು ಹೇಳಿ ಅದರ ಮೇಲೆ ಇವರನ್ನು ತೆಗೆದು ಹಾಕಿದ್ದಾರೆ. ಅವರ ಇಡೀ ಕುಟುಂಬ ಇವತ್ತು ಕಷ್ಟಕ್ಕೆ ಗುರಿಯಾಗಿದೆ. ಅವರ ಮಂದಿನ ಭವಿಷ್ಯ ಹಾಳಾಗಿದೆ. ಒಂದು ಸೇಡಿನ ಮನೋಭಾವನೆಯಿಂದ ಅಲ್ಲಿ ಇದು ನಡೆಯುತ್ತಿದೆ. ಇಲ್ಲಿ ಏನು ನಡೆದಿದೆ ಎಂದರೆ, ಮೇಲಧಿಕಾರಿಗಳಾದ ವ್ಯವಸ್ಥಾಪಕ ನಿರ್ದೇಶಕರು ಏನಿದ್ದಾರೆ ಇವರಂ ಸಾಕಷ್ಟು ಹಣ ಮಾಡಿದ್ದಾರೆ. ಇಲ್ಲಿನ ಮೇಲಧಿಕಾರಿಗಳಿಗೆ ಪ್ರತಿಯೊಬ್ಬರಿಗೂ ಸುಮಾರಂ ೪೦ ರಿಂದ ೫೦ ಲಕ್ಷ ರೂಪಾಯಿನ ಬಂಗಲೆ, ಕಾರುಗಳು, ನಿವೇಶನಗಳು ಮತ್ತು ಒಡವೆ ವಸ್ತ್ರಗಳು ಇವೆ. ಇದನ್ನು ಯಾವ ರೀತಿಯಲ್ಲಿ ಮಾಡಿದ್ದಾರೆ ಎಂದರೆ ಅಲ್ಲಿ ಒಂದು ಪ್ರಕರಣದಲ್ಲಿ ೯ ಲಕ್ಷ ರೂಪಾಯಿ ದುರುಪಯೋಗ ನಡೆದಿದೆ. ಅಲ್ಲಿಗೆ ಬೇಕಾದ ಕಾರನ್ ಪರ್ಚೇಸ್ ಮಾಡುವುದಕ್ಕೆ ಏಜೆಂಟರುಗಳಿಗೆ ಹಣ ಕೊಡುತ್ತಾರೆ. ಅವರಿಗೆ ೧೦ ಲಕ್ಷ ಕೊಟ್ಟರೆ, ಅದರಲ್ಲಿ ಇವರು ಐದು ಲಕ್ಷ ಇಟ್ಟು ಕೊಳ್ಳುತ್ತಾರೆ, ಕೊನೆಗೆ ಇವರನ್ನು ಡಿಫಾಲ್ಟರ್ಸ್ ಎಂದು ಕನ್ಸಿಡರ್ ಮಾಡಿ ಹಣ ದುರುಪಯೋಗ ಮಾಡಿಕೊಳ್ಳುತ್ತಾರೆ ೯ ಲಕ್ಷ ರೂಪಾಯಿಗಳನ್ನು ಏಜೆಂಟ್ಸ್ ಡಿಫಾಲ್ಟರ್ಸ್ ಲೆಕ್ಕಕ್ಕೆ ತೋರಿಸಿದ್ದಾರೆ. ಇದನ್ನು ಏಜೆಂಟರುಗಳು ತಿಂದಿದ್ದಾರೋ ಅಥವಾ ಅಧಿಕಾರಿಗಳು ತಿಂದಿದ್ದಾರೋ ಎಂಬುದನ್ನು ಸರಕಾರ ವಿಚಾರ ಮಾಡ

ಬೇಕಾಗಿದೆ. ಕಳೆದು ಎಂಟು ವರ್ಷಗಳಿಂದ ಏಜೆಂಟ್‌ಗಳಿಗೆ ಎಂದು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ೨೫ ಲಕ್ಷ ರೂಪಾಯಿ ಏಜೆಂಟರುಗಳಿಗೆ ಸಂದಾಯವಾಗಿಲ್ಲ. ಅದು ಅಧಿಕಾರಿಗಳಲ್ಲೇ ಉಳಿದಿದೆ. ಆಲ್ಲಿ ಏನು ಮಾಡುತ್ತಾರೆ ಎಂದರೆ ಕಾರನ್ ಸಪ್ಲೈ ಮಾಡತಕ್ಕ ಸಾಮಾನ್ಯ ಜನರನ್ನು ಏಜೆಂಟ್ಸ್ ಎಂದು ಮಾಡುತ್ತಾರೆ, ಆ ಏಜೆಂಟ್ಸ್ ಕಾರ್ನ್ ಪರ್ಚೇಸ್ ಮಾಡಿ ಲಾಭ ಮಾಡಿಕೊಂಡು ಅವನ ವ್ಯವಹಾರ ಮಾಡುತ್ತಿರುತ್ತಾರೆ. ಕಾರ್ನ್ ಪರ್ಚೇಸ್ ಮಾತಲು ಎಷ್ಟು ಹಣ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಅವನ ಹತ್ತಿರ ಲೆಕ್ಕ ಇರುವುದಿಲ್ಲ. ಇವರು ೧೦ ಸಾವಿರ ರೂಪಾಯಿಗಳನ್ನು ಅವನ ಕೈಗೆ ಕೊಟ್ಟು, ಲೆಕ್ಕದಲ್ಲಿ ೨೦ ಸಾವಿರ ಖರ್ಚು ಹಾಕಿದರೆ ಅದು ಅವನಿಗೆ ಗೊತ್ತಾಗುವುದಿಲ್ಲ. ಕೊನೆಗೆ ಅವನಿಂದ ಅದನ್ನು ಸರಿಪಡಿಸಿಕೊಂಡು, ಅದರಲ್ಲಿ ಅರ್ಧ ಹಣ ಹೊಡೆದುಕೊಂಡು ಹೋಗತಕ್ಕಂಥ ವ್ಯವಹಾರ ಆಗಿದೆ. ಕೊನೆಗೆ ಅವರನ್ನು ಡಿಫಾಲ್ಟರ್ಸ್ ಎಂದು ತೋರಿಸಿಬಿಡುತ್ತಾರೆ. ಈ ರೀತಿ ಅಲ್ಲಿ ನಡೆದಿದೆ.

ಅಧ್ಯಕ್ಷರೇ:— ಇದು ಪೌಷ್ಟಿಕ ಆಹಾರವನ್ನು ಉತ್ಪಾದನೆ ಮಾಡತಕ್ಕಂತ ಒಂದು ಕಂಪನಿ. ಮಕ್ಕಳಿಗೆ ಮತ್ತು ಜನಗಳಿಗೆ ಅವಶ್ಯಕವಾದ ಪೌಷ್ಟಿಕ ಆಹಾರವನ್ನು ಇವರು ಸರಬರಾಜು ಮಾಡುತ್ತಾರೆ ಇವರು ರಾಯದುರ್ಗ ಮತ್ತು ಯಲಬುರ್ಗ ಈ ಎರಡು ಕಡೆಗಳಿಗೆ ಪೌಷ್ಟಿಕ ಆಹಾರವನ್ನು ಶಾಲಾ ಮಕ್ಕಳಿಗಾಗಿ ಸರಬರಾಜು ಮಾಡಿರುತ್ತಾರೆ. ಆ ಊರುಗಳಲ್ಲಿ ಒಂದು ಶಾಲೆಯಲ್ಲಿ ೩೦೦ ಮಕ್ಕಳು, ಇನ್ನೊಂದು ಶಾಲೆಯಲ್ಲಿ ೨೨೦ ಮಕ್ಕಳೂ ಇದ್ದಾರೆ. ಅಷ್ಟು ದೊಡ್ಡ ಶಾಲೆಗಳು. ಇವರು ಅಲ್ಲಿಗೆ ಪೌಷ್ಟಿಕ ಆಹಾರವನ್ನು ಸರಬರಾಜು ಮಾಡಿದಂಥ ಕಾಲದಲ್ಲಿ ಆ ಶಾಲೆಯ ಮಕ್ಕಳು ಈ ಆಹಾರವನ್ನು ತಿಂದ ಮೇಲೆ ಅವರು ಅಸ್ವಸ್ಥರಾಗಿ ಆಸ್ಪತ್ರೆಗೆ ಸೇರಿರತಕ್ಕ ವಿಚಾರ ನಡೆದಿದೆ.

ತಕ್ಷಣ ಅವರ ತಲೆ ಮೇಲೆ ಬರಂತ್ತದೆಂದು ಹೇಳಿ ಅದನ್ನು ವಾಪಸ್ಸು ಹಾಕಿದರು. ಆ ಬಗೆ ಯಾವ ವಿಚಾರಣೆಯನ್ನು ಸಹ ಮಾಡಲಿಲ್ಲ. ದುರ್ವಹಾರ ಮಾಡಿರತಕ್ಕಂಥವರನ್ನು ಶಿಕ್ಷಿಸಬೇಕಂ ಆದು ಬಿಟ್ಟು ಒಬ್ಬರಿಗೆ ಕಿರುಕುಳ ಕೊಡತಕ್ಕಂಥ ಕೆಲಸವಾಗಬಾರದು. ಪೌಷ್ಟಿಕ ಆಹಾರದಲ್ಲಿ ಕೂಡ ಅವ್ಯವಹಾರ ನಡೆದಿದೆ, ಈ ಬಗ್ಗೆ ಕೂಡ ವಿಚಾರಣೆ ನಡೆಸಬೇಕಂ. ದೀರ್ಘಕಾಲದವರೆವಿಗೂ ಒಬ್ಬನೇ ಅಧಿಕಾರಿಯನ್ನು ಆ ಸಂಸ್ಥೆಯಲ್ಲಿಡಬಾರದು. ಇಂಟರ್‌ನಲ್ ರಿಪೋರ್ಟ್‌ನಲ್ಲಿ ಕೊಟ್ಟಿರತಕ್ಕಂಥ ವರದಿ ಸರಿಯಾಗಿಲ್ಲ. ಇನ್ನು ಏನೇನು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆಯೋ ಆ ಎಲ್ಲಾ ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಇಲಾಖೆಯಲ್ಲಿ ಡಿಸ್‌ಮಿಸ್ ಮಾಡಿರುವ ಒಬ್ಬ ನೌಕರನನ್ನು ಮತ್ತೆ ಕೆಲಸಕ್ಕೆ ತೆಗೆದು ಕೊಳ್ಳಬೇಕು. ಆ ನೌಕರನನ್ನು ಮಾನವೀಯತೆ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ ನೋಡಬೇಕು. ಆತನ ಕುಟುಂಬದಲ್ಲಿ ಆತನನ್ನು ಬಿಟ್ಟರೆ ಬೇರೆ ಯಾರೂ ದುಡಿಯುವವರು ಇಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಸೂಕ್ತ ಕ್ರಮ ಕೈಗೊಂಡು ಅನುಕೂಲ ಮಾಡಿಕೊಡಂತ್ತಾರೆಂದು ನಾನು ನಂಬಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ನನ್ನ ಶಾಸಕ ಮಿತ್ರರು ಅರ್ಧ ಗಂಟೆ ಚರ್ಚೆಯನ್ನು ತೆಗೆದುಕೊಂಡು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಸಂಸ್ಥೆಯಲ್ಲಿ ಕನ್ನಡಿಗರಿಗೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದರು, ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಲಂಚಗುಳಿತನ ಮತ್ತು ಅವ್ಯವಹಾರ ಮಾಡತಕ್ಕಂಥ ಅಧಿಕಾರಿಗಳನ್ನು ಡಿಫೆಂಡ್ ಮಾಡಿ ಮಾತನಾಡುವುದಾದರೆ ನಾವು ಸರ್ಕಾರ ನಡೆಸುವುದು ಬಹಳ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಅಧಿಕಾರಿ ಎಷ್ಟೂ ಅವ್ಯವಹಾರ ಮಾಡಿದ್ದಾನೆಂದರೆ ೩ ಸಾವಿರ ರೂಪಾಯಿಗಳು ಕ್ಯಾಷ್ ಮಿಸ್-ಅಪ್ರಾಪ್ರಿಯೇಷನ್, ೬ ಲಕ್ಷ ರೂಪಾಯಿಗಳು ಶಾರ್ಟೇಜ್, ೯೭ ಸಾವಿರ ರೂಪಾಯಿಗಳೆಷ್ಟು ಮಿಸ್ ಬಿಲ್ಲಿಂಗ್, ಇಂತಹ ಅಧಿಕಾರಿಯ ಬಗ್ಗೆ ನೀವು ಸಹಾನುಭೂತಿ ಹೇಗೆ ತೋರಿಸಬೇಕಂ ಎನ್ನುವುದನ್ನು ದಯವಿಟ್ಟು ತಾವೇ ಹೇಳಿ. ಈರೀತಿ ಅಧಿಕಾರಿಗಳನ್ನ ಡಿಫೆಂಡ್ ಮಾಡಿ ಮಾತನಾಡುತ್ತಾ ಹೋದರೆ ನಾವು ಸರ್ಕಾರ ಹೇಗೆ ನಡೆಸಬೇಕು?

ಶ್ರೀ ಎಂ. ಎಸ್. ಕೃಷ್ಣನ್. —ಅವ್ಯವಹಾರ ಮಾಡಿದ್ದಾನೆಂದು ಪ್ರೂವ್ ಆಗಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ.—ಅವ್ಯವಹಾರ ಮಾಡಿದವರ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜನತಾ ಸರ್ಕಾರ ತೆಗೆದುಕೊಳ್ಳುವುದಿಲ್ಲವೆಂದು ತಾವೇ ಹೇಳುತ್ತೀರಿ. ಕ್ರಮ ತೆಗೆದುಕೊಂಡರೆ ಅವರನ್ನು ತಾವೇ ಡಿಫೆಂಡ್ ಮಾಡಿ ಮಾತನಾಡುತ್ತೀರಿ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೃಷ್ಣನ್‌ರವರು

ಕೇಳಿದರು ಅವರ ಮೇಲೆ ಈ ದೂರುಗಳು ಪ್ರೂವ್ ಮಾಡಿದ್ದೀರಾ ಎಂದು, ಪ್ರೂವ್ ಆಗಿದೆ. ಇಂತಹವರನ್ನು ಯಾವ ರೀತಿ ರೀ–ಇನ್‌ಸ್ಟೇಟ್ ಮಾಡಬೇಕು? ಈ ಸಂಸ್ಥೆ ೧೯೨೩–೨೪ನೇ ಇಸವಿಯಲ್ಲಿ ಶುರುವಾಯಿತು, ಆಗಿನಿಂದ ಯಾವ ಎಂ.ಡಿ. ಇದ್ದರು, ಯಾವ ಅಧಿಕಾರಿಗಳು ಇದ್ದರು ಎನ್ನುವುದು ಮಹತ್ವದ ಪ್ರಶ್ನೆಯಲ್ಲ ಅಲ್ಲಿ ಆಗಿರತಕ್ಕಂಥ ಅಭಿವೃದ್ಧಿ ಮುಖ್ಯ. ಈ ಸಂಸ್ಥೆಯ ಒಟ್ಟು ಟರ್ನ್ ಓವರ್ ೧೯೮೨–೮೩ನೇ ಇಸವಿಯಲ್ಲಿ ೭ ಕೋಟಿ ರೂಪಾಯಿಗಳು ಇತ್ತು, ಈಗ ೧೯೮೬–೮೭ನೇ ಇಸವಿಯಲ್ಲಿ ಅದು ೧೫ ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ಈ ಸಂಸ್ಥೆ ೧೯೮೪ನೇ ಇಸವಿಗಿಂತ ಹಿಂದೆ ನಷ್ಟದಲ್ಲಿ ಇತ್ತು, ಈ ಸಂಸ್ಥೆಗೆ ಈಗ ಇರತಕ್ಕಂಥ ಎಂ.ಡಿ ಯವರು ಬಂದ ಮೇಲೆ ಅಂದರೆ ೧೯೮೬–೮೭ನೇ ಇಸವಿಯಲ್ಲಿ ೯೫ ಲಕ್ಷ ರೂಪಾಯಿಗಳ ಲಾಭ ಮಾಡಿದ್ದಾರೆ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವುದಾದರೊಂದು ಆಪಾದನೆ ಮಾಡುವಾಗ ಜವಾಬ್ದಾರಿಯಿಂದ ಆಪಾದನೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಒಬ್ಬ ನೌಕರನ ಬಗ್ಗೆ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನು ದಿನಾಂಕ ೨೫–೧೦–೮೫ರಲ್ಲಿ ನೇಮಿಸಲಾಯಿತು. ವಿಚಾರಣಾಧಿಕಾರಿ ದಿನಾಂಕ ೧೮–೯–೮೬ರಲ್ಲಿ ವರದಿಯನ್ನು ಕೊಟ್ಟರು. ತದನಂತರ ದಿನಾಂಕ ೧೨–೧೧–೮೬ರಲ್ಲಿ ಆ ನೌಕರನನ್ನು ಡಿಸ್‌ಮಿಸ್ ಮಾಡಲಾಯಿತು. ಆ ನೌಕರ ಪುನಃ ಅಪೀಲು ಮಾಡಿದ್ದರು. ಆಗ ಆ ನೌಕರನೇ ನಾನು ತಪ್ಪು ಮಾಡಿದ್ದೇನೆಂದು ಒಪ್ಪಿಕೊಂಡಿದ್ದಾನೆ. ಆದ್ದರಿಂದ ಆ ನೌಕರನ ಅಪೀಲು ಸಹ ಡಿಸ್‌ಮಿಸ್ ಮಾಡಿದ್ದಾರೆ. ಇಂಥ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಸಹಾನುಭೂತಿ ಇರಲಿಕ್ಕೆ ಸಾಧ್ಯವೇ? ಆ ಸಂಸ್ಥೆಯಲ್ಲಿ ಕಾರ್ಮಿಕರ ಸಂಬಂಧ ಬಹಳ ಚೆನ್ನಾಗಿದೆ, ಕಳೆದ ಮೂರ್ನಾಲು ವರ್ಷಗಳಿಂದ ಕಾರ್ಮಿಕರಿಗೆ ೨೦ ಪರ್‌ಸೆಂಟ್ ಬೋನಸ್ ಕೂಡ ಕೊಡುತ್ತಿದೆ. ಆ ಸಂಸ್ಥೆಯಲ್ಲಿ ಕಾರ್ಮಿಕರ ಯಾವ ಗಲಾಟೆ ಇಲ್ಲ, ಸ್ಟ್ರೈಕ್ ಇಲ್ಲ. ಒಂದು ಪಕ್ಷ ಯಾವುದಾದರೂ ಕಾರ್ಮಿಕರ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದರೆ ನೇರವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಆಪಾದನೆಯನ್ನು ಮಾಡುವಾಗ ಜವಾಬ್ದಾರಿಯುತವಾಗಿ ಆಪಾದನೆಯನ್ನು ಮಾಡಬೇಕು. ಆಪಾದನೆ ಮಾಡುವಾಗ ಪುರಾವೆಗಳನ್ನು ಕೊಡಬೇಕು. ಆಗ ಸರ್ಕಾರ ನಿರ್ದಿಷ್ಟ ಕ್ರಮ ತೆಗೆದುಕೊಳ್ಳುತ್ತದೆ We will not shield any officer, however high he is. ಆಪಾದನೆ ಮಾಡುವವರು ಬಹಳ ಜವಾಬ್ದಾರಿಯಿಂದ ಮಾಡಬೇಕು. ಆಪಾದನೆ ಮಾಡುವುದಕ್ಕಿಂತ ಮುಂಚಿತವಾಗಿ ಈ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿಲ್ಲ ಹುಲಿಮನಿ ಎಂಬ ಒಬ್ಬ ಡಿಸ್‌ಮಿಸ್ ಆದ ಆಫೀಸರ್ ಬಗ್ಗೆ ಸದನದಲ್ಲಿ ಇಷ್ಟು ಹೊತ್ತು ಚರ್ಚೆ ಮಾಡುವ ಅವಶ್ಯಕತೆ ಇರಲಿಲ್ಲ. ಆ ಮೇಲೆ, ಮಾನ್ಯ ಸದಸ್ಯರು ಎಲ್ಲಬ್ಬರ್ಗಾದಲ್ಲಿ ಕಲಬೆರಕೆ ಆಹಾರವನ್ನು ತಿಂದು ಬಹಳ ಆಸ್ವಸ್ಥರಾಗಿದ್ದರು. ಈ ರೀತಿ ಕಲಬೆರಕೆ ಆಹಾರ ಸರಬರಾಜು ಮಾಡಿದವರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಕೇಸ್‌ನ್ನು ಮುಚ್ಚಿ ಹಾಕಿದ್ದಾರೆಂದು ಹೇಳಿದ್ದಾರೆ. ಈ ವಿಷಯ ಯಾವ ಪತ್ರಿಕೆಗಳಲ್ಲೂ ಬಂದಿಲ್ಲ, ಸರ್ಕಾರದ ಗಮನಕ್ಕೂ ಬಂದಿಲ್ಲ ಅಂದ ಮೇಲೆ ನಾವು ಯಾರ ಮೇಲೆ ಕ್ರಮ ತೆಗೆದುಕೊಳ್ಳುವುದು? ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಮೊದಲೇ ಗೊತ್ತಿದ್ದ ಪಕ್ಷದಲ್ಲಿ ಅವರು ಇದಕ್ಕಿಂತ ಮೊದಲು ಸದನದಲ್ಲಿ ಏಕೆ ಪ್ರಸ್ತಾಪ ಮಾಡಲಿಲ್ಲ? ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ ಸರ್ಕಾರದ ಗಮನ ಸೆಳೆಯಬಹುದಾಗಿತ್ತು. ಯಾವುದೇ ಆಪಾದನೆ ಮಾಡಿದರೆ ಅದನ್ನು ಗಂಭೀರವಾಗಿ ಮಾಡಬೇಕು. ನನ್ನ ಶಾಸಕ ಮಿತ್ರರು ಮಾಡಿರುವ ಆಪಾದನೆಯಲ್ಲಿ ಏನು ತಳ ಬುಡ ಇಲ್ಲ. ನೇರವಾಗಿ ಇಂಥವರು ತಪ್ಪು ಕೆಲಸ ಮಾಡಿದ್ದಾರೆಂದು ಆಪಾದನೆ ಮಾಡಿದರೆ, ಅದರ ಬಗ್ಗೆ ಸರ್ಕಾರ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತದೆ. ನಂತರ, ಆ ಸಂಸ್ಥೆಯಲ್ಲಿ ಅಂದರೆ, ಆರ್ಮೋ ಕಾರ್ನ್‌ನಲ್ಲಿ ಕನ್ನಡಿಗರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲವೆಂದು ಹೇಳಿದ್ದಾರೆ. ಈ ಸಂಸ್ಥೆಯಲ್ಲಿ ಒಟ್ಟು ೪೫೩ ಜನ ಕೆಲಸ ಮಾಡುತ್ತಿದ್ದಾರೆ, ಆವರಲ್ಲಿ ೪೩ ಜನ ಕನ್ನಡಿಗರಿದ್ದಾರೆ. ಇನ್ನು ಉಳಿದ ೩೦ ಜನರು ಬೇರೆ ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ಬೇರೇ ರಾಜ್ಯದ ಅಧಿಕಾರಿಗಳು ಒಳ್ಳೊಳ್ಳೆ ಕೀ–ಪೋಸ್ಟ್‌ಗಳಲ್ಲಿದ್ದಾರೆಂದು ಸಹ ಹೇಳಿದ್ದಾರೆ. ನಮ್ಮ ಕನ್ನಡಿಗರೂ ಕೀ–ಪೋಸ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ಸಂಸ್ಥೆಯನ್ನು ತೆಗೆದುಕೊಳ್ಳಿ, ಅದರಲ್ಲಿ ಬೇರೆ ರಾಜ್ಯದ ಜನರು ಕೆಲಸದಲ್ಲಿ ಇರುತ್ತಾರೆ. ನಮ್ಮ ಕನ್ನಡಿಗರೂ ಸಹ ಮಹಾರಾಷ್ಟ್ರ, ಮದ್ರಾಸ್, ತಮಿಳುನಾಡಿನಂಗಳಲ್ಲಿ ಕೆಲಸ ಮಾಡುತ್ತಿಲ್ಲವೇ, ಅದೇ ರೀತಿ ಬೇರೆ ರಾಜ್ಯದವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನಾವು ಬೇರೆ ರಾಜ್ಯದವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದೂ ಹೇಳುವುದಕ್ಕೆ ಬರುವುದಿಲ್ಲ. ಈ ಸಂಸ್ಥೆಯಲ್ಲಿ ಕನ್ನಡಿಗರಿಗೆ ಬೇಕಿಯವರು ಕಿರುಕುಳ ಕೊಡುತ್ತಿದ್ದಾರೆಂದು ಸಹ ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಯಾವುದೇ

ಮಾಹಿತಿ ಬಂದಿಲ್ಲ. ಈ ಸಂಸ್ಥೆಯಲ್ಲಿ ಕಾರ್ಮಿಕರ ಸಂಬಂಧ ಬಹಳ ಚೆನ್ನಾಗಿದೆ. ಸರ್ಕಾರವು ಆ ವ್ಯಕ್ತಿಯನ್ನು ಯಾವುದೇ ದುರುದ್ದೇಶದಿಂದಾಗಲೀ ಅಥವಾ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದಾಗಲೀ ಡಿಸ್‌ಮಿಸ್ ಮಾಡಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಂತ್ತೇನೆ. ಅವರು ಬಹಳ ಹಣವನ್ನು ಮಿಸ್ ಅಪ್ರೊಪ್ರಿಯೇಷನ್ ಮಾಡಿದ್ದಾರೆಂದು ನಾನು ಹೇಳಿದ್ದೇನೆ. ಈ ಸಂಸ್ಥೆ ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿದೆ. ಇದನ್ನು ನಾವು ಇನ್ನೂ ಚೆನ್ನಾಗಿ ಬೆಳೆಸಬೇಕು. ಬೇರೆ ಸಂಸ್ಥೆಗಳಲ್ಲಿ ಇಷ್ಟು ಕೋಟಿ ರೂಪಾಯಿ ಲಾಕ್ಸಾನಾಗಿದೆ. ಅಷ್ಟು ಕೋಟಿ ರೂಪಾಯಿ ಲಾಕ್ಸಾನಾಗಿದೆ ಎಂದು ಹೇಳುತ್ತಾರೆ. ಆದರೆ ಈ ಸಂಸ್ಥೆಯು ಚೆನ್ನಾಗಿ ಲಾಭ ಮಾಡುತ್ತಿದೆ. 'ಹುಲಿಮನಿ'ಯವರನ್ನು ಡಿಸ್‌ಮಿಸ್ ಮಾಡಿದ ಮೇಲೆ ಅವರಿಗೆ ಸುಮ್ಮನೆ ಕೆಲಸ ಇಲ್ಲದೆ ಕುಳಿತುಕೊಳ್ಳುವುದಕ್ಕಾಗದೆ ಆ ಸಂಸ್ಥೆಯ ಹತ್ತಿರ ಹೋಗಿ ಕಾರ್ಮಿಕರನ್ನು ಎತ್ತಿಕಟ್ಟುವುದು, ಇಲ್ಲಸಲ್ಲದ ಕೆಲಸ ಮಾಡುತ್ತಿದ್ದಾರೆಂದು ನಮಗೆ ತಿಳಿದು ಬಂದಿದೆ. ಇಂಥವರನ್ನು ಸಹಕಾರ ಕೊಡುವುದಕ್ಕೆ ಅಥವಾ ರೀ-ಇನ್‌ಸ್ಟೇಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಬಸವರಾಜ ಪಾಟೀಲರು ಹಿಂದೆ ಈ ವ್ಯಕ್ತಿ ಬಗ್ಗೆ ಒಳ್ಳೆಯದನ್ನು ಮಾಡುವುದಕ್ಕೆ ಹೇಳಿದ್ದರು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಬಸವರಾಜ ಪಾಟೀಲರು ಒಂದು ಸಹಾನುಭೂತಿಯಿಂದ ಆ ನಿರ್ಣಯಕ್ಕೆ ಬಂದಿದ್ದಿರಬಹುದು. ಆದರೆ, ಇವರ ಬಗ್ಗೆ ಸರ್ಕಾರ ಅಂತಿಮ ನಿರ್ಣಯ ತೆಗೆದುಕೊಂಡಿದೆ ಪುನಃ No direction is given to the Agro-corn.

ಅಂತಿಮವಾದಲ್ಲಿ ನನಗೆ ಇವರ ಫೈಲ್ ಬಂದಾಗ ನಾನು ಈ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೇನೆ. ಇಂಥ ಕರಪ್ಟ್ ಆಫೀಸರನ್ನು ಶೀಲ್ಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಸಂಸ್ಥೆಯಲ್ಲಿ ಕನ್ನಡಿಗರಿಗೆ ಯಾವುದೇ ತರದ ಕಿರುಕುಳ ಆಗುತ್ತಿಲ್ಲ. ಅಂಥಾದ್ದೇನಾದರೂ ಕಂಡುಬಂದಲ್ಲಿ, ಸರಕಾರದ ಗಮನಕ್ಕೆ ತರಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಒಂದೇ ಕ್ಲಾರಿಫಿಕೇಷನ್.

ಅಧ್ಯಕ್ಷರು.—ಮಂತ್ರಿ ಏನು ಕೇಳುತ್ತಿರಿ? ಮಾನ್ಯ ಲಕ್ಕಪ್ಪನವರೇ ಸಾಕಾ. ಈಗ ಸಭೆಯು ಮುಂಕಾಯುವಾಗಿ ನಾಳೆ ಬೆಳಿಗ್ಗೆ ೯-೦೦ ಘಂಟೆಗೆ ಸೇರುವುದು.

ಸಭೆಯು ೭ ಘಂಟೆ ೨೫ ನಿಮಿಷಕ್ಕೆ ಮುಂದೂಡಲ್ಪಟ್ಟು ಮಂತ್ರಿ
೧೧-೯-೧೦೮೭ ರಂದು ಬೆಳಿಗ್ಗೆ ೯ ಘಂಟೆಗೆ ಸೇರಲು ತೀರ್ಮಾನಿಸಿತು.